ಭಾರತೀಯ ವೈದ್ಯಕೀಯ ಪದ್ಧತಿ ಇಲಾಖೆಯಲ್ಲಿ ಹಿಂದಿಳಿದ ವರ್ಗ ಮತ್ತು ಅಲ್ಪ ಸಂಖ್ಯಾತರ ನೇಮಕಾತಿ

2919 - ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಾರತೀಯ ವೈದ್ಯ ಪದ್ಧತಿ ಇಲಾಖೆಯಲ್ಲಿ ಹಿಂದುಳಿದ ವರ್ಗದವರಿಗೆ ಮತ್ತು ಅಲ್ಪ ಸಂಖ್ಯಾತರಿಗೆ ನಿಯಮಾವಳಿ ಪ್ರಕಾರ ನೇಮಕವಾಗಿದೆಯೇ?

ಆ) ಹಾಗಿಲ್ಲದಿದ್ದಲ್ಲಿ ಯಾವ ಕಾರಣದಿಂದ ತಡೆಹಿಡಿಯಲಾಗಿದೆ, (ಅಂಕಿ ಅಂಶ ನೀಡುವುದು)?

ಡಾ|| ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಸರ್ಕಾರವು ಕಾಲಕಾಲಕ್ಕೆ ಹೊರಡಿಸಿರುವ ಆದೇಶಗಳಿಗನುಗುಣವಾಗಿ ಇಲಾಖೆಯಲ್ಲಿ ಹಿಂದುಳಿದ ವರ್ಗದವರಿಗೆ ಮತ್ತು ಅಲ್ಪ ಸಂಖ್ಯಾತರಿಗೆ ಆಯಾ ಹುದ್ದೆಗಳ ನಿಯಮಾವಳಿ ಪ್ರಕಾರ ನೇಮಕ ಮಾಡಲಾಗುತ್ತಿದೆ.

ಆ) -ಉದ್ಭವಿಸುವುದಿಲ್ಲ-

ಗ್ರಾಮೀಣ ಚಿಕಿತ್ಸಾಲಯಗಳಲ್ಲಿ ಪೂರ್ಣಾವಧಿ ಸಿಬ್ಬಂದಿವರ್ಗ ನೇಮಕ

2920 - ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಾರತೀಯ ವೈದ್ಯ ಪದ್ಧತಿ ಇಲಾಖೆಯಲ್ಲಿ ಸೇರ್ಪಡೆಯಾಗಿರುವ ಗ್ರಾಮೀಣ ಚಿಕಿತ್ಸಾಲಯಗಳಲ್ಲಿ ಪೂರ್ಣಾವಧಿ ಸಿಬ್ಬಂದಿ ವರ್ಗದವರು ನೇಮಕಗೊಂಡಿದ್ದಾರೆಯೇ?

ಆ) ಈ ಚಿಕಿತ್ಸಾಲಯಗಳಿಗೆ ಔಷಧ ವಿತರಕರುಗಳ ಹುದ್ದೆ ಮಂಜೂರಾಗಿದೆಯೇ?

ಇ) ಸುಮಾರು 350 ಕ್ಕೂ ಮೀರಿದ ಗ್ರಾಮೀಣ ಪ್ರದೇಶದ ಚಿಕಿತ್ಸಾಲಯಗಳಲ್ಲಿ ಔಷಧ ವಿತರಕರುಗಳ ಹುದ್ದೆ ಖಾಲಿ ಇರುವುದು ನಿಜವಲ್ಲವೆ?

ಈ) ಹಾಗಿದ್ದಲ್ಲಿ ಇದನ್ನು ಯಾವಾಗ ಭರ್ತಿ ಮಾಡಲಾಗುವುದು?

ಡಾ|| ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಭಾರತೀಯ ವೈದ್ಯ ಪದ್ಧತಿ ಇಲಾಖೆಯಲ್ಲಿ ಸೇರ್ಪಡೆಯಾಗಿರುವ ಗ್ರಾಮೀಣ ಚಿಕಿತ್ಸಾಲಯಗಳಲ್ಲಿ ಪೂರ್ಣಾವಧಿ (ಖಾಯಂ) ಸಿಬ್ಬಂದಿ ಮತ್ತು ಗುತ್ತಿಗೆ ಆಧಾರದ ಮೇಲೆ ವೈದ್ಯರು ನೇಮಕಗೊಂಡಿದ್ದಾರೆ. ಕೆಲವು ಹುದ್ದೆಗಳು ಖಾಲಿ ಇದೆ.

ಆ) ಇಲಾಖೆಯಲ್ಲಿನ ಎಲ್ಲಾ ಗ್ರಾಮೀಣ ಚಿಕಿತ್ಸಾಲಯಗಳಿಗೆ ಔಷಧಿ ವಿತರಕರ ಹುದ್ದೆ